# ಕನ್ನಡ ಪೋಸ್ಟ್

KANNADA POST

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 97 | Pages. 2 | Date: 17-03-2026, TUESDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 97 - ಪುಟಗಳು : 2 | 17-03-2026 | ಮಂಗಳವಾರ | Ph: 8762954248 | ದರ : ₹1


# ಹಾಸನದಲ್ಲಿ ಆಲಿಕಲ್ಲು ಸಹಿತ ಜೋರು ಮಳೆ

## ಚನ್ನರಾಯಪಟ್ಟಣದಲ್ಲಿ ಸಿಡಿಲಿಗೆ ಹಸು ಸಾವು | ಕಾಫಿ ಬೆಳೆಗಾರರಿಗೆ ವರದಾನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರ ಸೇರಿ ಜಿಲ್ಲೆಯ ವಿವಿಧೆಡೆ ಸೋಮವಾರ ಸಂಜೆ ಧಾರಾಕಾರ ಮಳೆ ಸುರಿದು ಇಳೆಗೆ ತಂಪೆರೆಯಿತು.

ಆಲಿಕಲ್ಲು, ಜೋರು ಗಾಳಿಯೊಂದಿಗೆ 40 ನಿಮಿಷಕ್ಕೂ ಹೆಚ್ಚು ಕಾಲ ಸುರಿದ ಮಳೆಯಿಂದ ಭೂಮಿ ತಣ್ಣಗಾಯಿತು. ಕಳೆದ ಹಲವು ದಿನಗಳಿಂದ ಬಿಸಿಲ ಬೇಗೆ ಹೆಚ್ಚಾಗಿ ತಾಪಮಾನದಲ್ಲಿ ಏರಿಕೆ ಕಂಡುಬಂದಿತ್ತು. ಬೇಸಿಗೆಯ ಝಳಕ್ಕೆ ಜನರು ಹೈರಾಣಾಗಿದ್ದರು. ಏಕಾಏಕಿ ಸುರಿದ ಮಳೆ ರೈತರಿಗೆ ಹರ್ಷವುಂಟು ಮಾಡಿದೆ. ಹಾಸನ, ಆಲೂರು, ಸಕಲೇಶಪುರ, ಚನ್ನರಾಯಪಟ್ಟಣ ವ್ಯಾಪ್ತಿಯಲ್ಲಿ ಉತ್ತಮ ಮಳೆಯಾಗಿದೆ.

ಚನ್ನರಾಯಪಟ್ಟಣ ತಾಲೂಕಿನ ದಂಡಿಗನಹಳ್ಳಿ ಹೋಬಳಿ ಬಳದರೆ ಗ್ರಾಮದಲ್ಲಿ ಸಿಡಿಲು ಬಡಿದು ಸೋಮವಾರ ಹಸು ಮೃತಪಟ್ಟಿದೆ.

ಸಂಜೆ 6 ಗಂಟೆಗೆ ಮೋಡ ಕವಿದ ವಾತಾವರಣ ಸೃಷ್ಟಿಯಾಗಿ 7 ರಿಂದ ಮಿಂಚು, ಗುಡುಗು ಹಾಗು ಅಬ್ಬರದ ಗಾಳಿಯೊಂದಿಗೆ ಮಳೆ ಪ್ರಾರಂಭವಾಯಿತು. ಮಳೆ ಕಡಿಮೆಯಿದ್ದರೂ ಗುಡುಗು ಹಾಗು ಗಾಳಿಯ ಅಬ್ಬರ ಜೋರಾಗಿತ್ತು. ಮನೆಯ ಸಮೀಪ ತೆಂಗಿನ ಮರದಡಿ ಕಟ್ಟಿದ್ದ ವಿನೋದಮ್ಮ ಅವರಿಗೆ ಸೇರಿದ ಹಸು ಅಸುನೀಗಿದೆ.

### ದಿಢೀರ್ ಮಳೆಗೆ ಜನಜೀವನ ಅಸ್ತವ್ಯಸ್ತ

ದಿಢೀರ್ ಸುರಿದ ಮಳೆಯಿಂದ ಸಾರ್ವಜನಿಕರು



ತತ್ತರಿಸುವಂತಾಯಿತು. ಕೆಲಸ ಮುಗಿಸಿ ಮನೆಗೆ ತೆರಳುತ್ತಿದ್ದ ಜನರು ಹಾಗೂ ಶಾಲಾ-ಕಾಲೇಜು ವಿದ್ಯಾರ್ಥಿಗಳು ಪರದಾಡಿದರು.

ಗುಡುಗು ಸಹಿತ ಸುರಿದ ಮಳೆಯ ತೀವ್ರತೆಯಿಂದ ಜನರು ಆತಂಕಗೊಂಡು ಸಿಕ್ಕ ಸಿಕ್ಕ ಕಟ್ಟಡಗಳು, ಅಂಗಡಿಗಳು ಹಾಗೂ ಮಳೆಯಿಂದ ರಕ್ಷಣೆ ದೊರೆಯುವ ಸ್ಥಳಗಳಲ್ಲಿ ಆಶ್ರಯ ಪಡೆದರು.

ಮಳೆಯೊಂದಿಗೆ ಭಾರೀ ಪ್ರಮಾಣದಲ್ಲಿ ಆಲಿಕಲ್ಲುಗಳು ಸುರಿದ ಪರಿಣಾಮ ಕೆಲ ವಾಹನಗಳ ಗಾಜುಗಳು ಹಾನಿಗೊಂಡಿರುವುದು ಕಂಡುಬಂದಿದೆ. ಕೆಲವು ಮನೆಗಳ ಹಾಗೂ ಕಟ್ಟಡಗಳ ಹೆಂಚುಗಳಿಗೂ ಹಾನಿಯಾಗಿದೆ. ಆಲಿಕಲ್ಲುಗಳು ರಸ್ತೆಯ ಮೇಲೆ ಬಿದ್ದ ಪರಿಣಾಮ ಕೆಲಕಾಲ ರಸ್ತೆ ಬಿಳಿಯಾಗಿ ಕಾಣಿಸಿಕೊಂಡ ದೃಶ್ಯಗಳು ನಗರದಲ್ಲಿ ಕಂಡುಬಂದವು. ನಗರದ ಎಂ.ಜಿ.ರಸ್ತೆ, ಬಿಎಂ ರಸ್ತೆ, ಎನ್ ಆರ್ ವೃತ್ತದ ತುಂಬೆಲ್ಲ ಆಲಿಕಲ್ಲು ರಾಶಿ ರಾಶಿ ಬಿದ್ದಿದ್ದವು.

ಮಳೆ ನೀರು ರಸ್ತೆಗಳಲ್ಲಿ ಹರಿದು ಸಂಚಾರಕ್ಕೆ ಅಡಚಣೆ ಉಂಟಾಯಿತು. ತಗ್ಗು ಪ್ರದೇಶಗಳಲ್ಲಿ ನೀರು ಜಮಾಯಿಸಿದ ಪರಿಣಾಮ ವಾಹನಗಳು ನಿಧಾನವಾಗಿ ಸಂಚರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು. ಜಿಲ್ಲಾ ಕ್ರೀಡಾಂಗಣದ ಪ್ರವೇಶದ್ವಾರದ ಬಳಿಯ ರಸ್ತೆ ಸಂಪೂರ್ಣವಾಗಿ ನೀರಿನಿಂದ ತುಂಬಿ ಕೆರೆಯಂತಾಗಿತ್ತು. ಇದರಿಂದ ಆ ಭಾಗದಲ್ಲಿ ವಾಹನ ಸಂಚಾರ ಕೆಲಕಾಲ ಅಸ್ತವ್ಯಸ್ತಗೊಂಡಿತು. ಮಳೆಯಿಂದ ಕ್ರೀಡಾಂಗಣ ಕೆಸರು ಮಯವಾಗಿತ್ತು.


ಏಕಾಏಕಿ ಸುರಿದ ಮಳೆಯಿಂದ ಬೀದಿ ಬದಿ ವ್ಯಾಪಾರಿಗಳು ಸಂಕಷ್ಟ ಅನುಭವಿಸಿದರು. ಹಣ್ಣು, ತರಕಾರಿ ಹಾಗು ಇತರೆ ವಸ್ತುಗಳನ್ನು ಮಾರಾಟಕ್ಕೆ ಇಟ್ಟಿದ್ದ ವ್ಯಾಪಾರಿಗಳು ಅವುಗಳನ್ನು ಮಳೆಯಿಂದ ರಕ್ಷಿಸಲು ತೀವ್ರ ಪ್ರಯತ್ನ ನಡೆಸಿದರು. ಕೆಲವರ ವಸ್ತುಗಳು ಮಳೆಯಿಂದ ತೇವವಾಗಿ ನಷ್ಟ ಉಂಟಾಯಿತು. ನಗರದ ಕೆಲವು ಪ್ರದೇಶಗಳಲ್ಲಿ ಗಾಳಿ ಸಹಿತ ಮಳೆ ಸುರಿದ ಪರಿಣಾಮ ಮರಗಳ ಸಣ್ಣಪುಟ್ಟ ಕೊಂಬೆಗಳು ಮುರಿದು ಬಿದ್ದಿದ್ದು ಯಾವುದೇ ಅನಾಹುತ ಸಂಭವಿಸಿಲ್ಲ.

### ಕಾಫಿ ಬೆಳೆಗೆ ಮಳೆ ಬೇಕಿದೆ

**ಸಕಲೇಶಪುರ ತಾಲ್ಲೂಕಿನ ಹಾನುಬಾಳು, ಹೆತ್ತೂರು ಮತ್ತು ಯಸಳೂರು ಭಾಗಗಳಲ್ಲಿ ಅಲ್ಪ ಪ್ರಮಾಣದಲ್ಲಿ ಮಳೆಯಾಗಿದೆ.**

**ಸಕಲೇಶಪುರ, ಬೇಲೂರು, ಆಲೂರು ತಾಲ್ಲೂಕು ವ್ಯಾಪ್ತಿಯ ಕಾಫಿ ಬೆಳೆಗಾರರು ಮಳೆಯ ನಿರೀಕ್ಷೆಯಲ್ಲಿದ್ದಾರೆ. ಕೆಲ ಭಾಗಗಲ್ಲಿ ತುಂತುರು ಮಳೆಯಾದರೆ, ಇನ್ನು ಹಲವೆಡೆ ಮೋಡ ಕವಿದ ವಾತಾವರಣ ಇದ್ದರೂ ಮಳೆಯಾಗಿಲ್ಲ. ಹೀಗಾಗಿ ಕಾಫಿ ಬೆಳೆಗಾರರು ಮಳೆಯ ನಿರೀಕ್ಷೆಯಲ್ಲಿದ್ದಾರೆ.**

# ಸಂಸತ್ ಲೈಬ್ರರಿಯಲ್ಲಿ ತಾತನ ಹೆಜ್ಜೆ ಗುರುತು ಕಂಡ ಸಂಸದ ಶ್ರೇಯಸ್



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ನವದೆಹಲಿ: ಇಲ್ಲಿನ ಸಂಸತ್ ಭವನದಲ್ಲಿರುವ ಗ್ರಂಥಾಲಯಕ್ಕೆ ಸಂಸದ ಶ್ರೇಯಸ್ ಪಟೇಲ್ ಅವರು ಭೇಟಿ ನೀಡಿ ಸಂಸದರಾಗಿ ಸೇವೆ ಸಲ್ಲಿಸಿರುವ ಗಣ್ಯರ ಕುರಿತು ದಾಖಲಾಗಿರುವ ಮಾಹಿತಿಗಳನ್ನು ಓದಿದರು.

13ನೇ ಲೋಕಸಭೆ ಚುನಾವಣೆಯಲ್ಲಿ ಹಾಸನ ಲೋಕಸಭಾ ಕ್ಷೇತ್ರದಿಂದ ಗೆಲುವು ಸಾಧಿಸಿ ಸಂಸತ್ ಪ್ರವೇಶಿಸಿದ್ದ ಸಂಸದರ ತಾತ ದಿ. ಪುಟ್ಟಸ್ವಾಮಿಗೌಡ ಅವರ ಕುರಿತು ಸಂಗ್ರಹವಾಗಿರುವ ಮಾಹಿತಿಯನ್ನು ಓದಿದರು.

ಹೊಳೆನರಸೀಪುರದಂತಹ ಸಣ್ಣ ಪಟ್ಟಣದಿಂದ ರಾಜಕೀಯ ಪಯಣ ಆರಂಭಿಸಿದ ಪುಟ್ಟಸ್ವಾಮಿಗೌಡ ಅವರು ಜನಸೇವೆಯ ಮೂಲಕ ದೊಡ್ಡ ಗುರುತು ಮೂಡಿಸಿದ್ದಾರೆ. 1978 ರಿಂದ 1984ರ ವರೆಗೆ ಶಾಸಕರಾಗಿ ಸೇವೆ ಸಲ್ಲಿಸಿ ಬಳಿಕ ವಿವಿಧ ಸಮಿತಿಗಳ ಸದಸ್ಯರಾಗಿ ಕಾರ್ಯನಿರ್ವಹಿಸಿದರು. 1999ರಲ್ಲಿ ಹಾಸನ ಕ್ಷೇತ್ರದಿಂದ ಸಂಸದರಾಗಿಯೂ ಆಯ್ಕೆಯಾಗಿ ಜಿಲ್ಲೆಯನ್ನು ಸಂಸತ್ತಿನಲ್ಲಿ ಪ್ರತಿನಿಧಿಸಿದರು. ಅದರ ಜೊತೆಗೆ 1989 ರಿಂದ 1993ರವರೆಗೆ ಕರ್ನಾಟಕ ರಾಜ್ಯದಲ್ಲಿ ಲೋಕೋಪಯೋಗಿ ಸಚಿವರಾಗಿ ಸೇವೆ ಸಲ್ಲಿಸಿ ಅಭಿವೃದ್ಧಿ ಕಾರ್ಯಗಳಿಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ.

ಈ ಕುರಿತು ಮಾತನಾಡಿರುವ ಸಂಸದ ಶ್ರೇಯಸ್ ಪಟೇಲ್ ಅವರು, ಜನರ ಶ್ರೇಯೋಭಿವೃದ್ಧಿಯೇ ಅವರ ರಾಜಕೀಯದ ಗುರಿಯಾಗಿತ್ತು. ತಾತನವರು ತೋರಿದ ಸೇವಾ ಮನೋಭಾವ ಹಾಗೂ ಅಭಿವೃದ್ಧಿಯ ದಾರಿಯೇ ನನಗೆ ಪ್ರೇರಣೆ. ಅವರು ಹಾಕಿಕೊಟ್ಟ ಆ ಮಾರ್ಗದಲ್ಲಿ ಸಾಗುತ್ತೇನೆ ಎಂದಿದ್ದಾರೆ.

# ಶ್ರಮ ಕಚೇರಿಯಲ್ಲಿ ಚಂದ್ರಪ್ರಸಾದ್ ತ್ಯಾಗಿ ಸ್ಮರಣೆ

ಹಾಸನ: ದಲಿತ ಚಳವಳಿಯ ನೇತಾರ ಬಿ.ವಿ.ಚಂದ್ರಪ್ರಸಾದ್ ತ್ಯಾಗಿ ಅವರ 20ನೇ ವರ್ಷದ ಸಂಸ್ಮರಣೆ ಕಾರ್ಯಕ್ರಮ ನಗರದ ಶ್ರಮ ಕಚೇರಿಯಲ್ಲಿ ನೆರವೇರಿತು.

ದಲಿತ ಮುಖಂಡರಾದ ಹೆಚ್.ಕೆ.ಸಂದೇಶ್, ಕೃಷ್ಣದಾಸ್ ಮತ್ತಿತರರು ಮಾತನಾಡಿ, ಚಂದ್ರಪ್ರಸಾದ್ ತ್ಯಾಗಿ ಅವರು ಜಾತಿ ತಾರತಮ್ಯ-ಅಸ್ಪೃಶ್ಯತಾ ಆಚರಣೆಗಳ ವಿರುದ್ಧ ಪ್ರಬಲ ಹೋರಾಟ ರೂಪಿಸಿದ್ದರು. ಚಿಕ್ಕ ವಯಸ್ಸಿನಲ್ಲಿಯೇ ಹೋರಾಟದ ಕಿಚ್ಚನ್ನು ಬೆಳೆಸಿಕೊಂಡಿದ್ದರು. ಭದ್ರಾವತಿಯ ವಿಶ್ವೇಶ್ವರಯ್ಯ ಉಕ್ಕು ಮತ್ತು ಕಬ್ಬಿಣ ಕಾರ್ಖಾನೆಯಲ್ಲಿ ಕಾರ್ಮಿಕರಾಗಿ ಸೇರಿ ಅಲ್ಲಿ ನಡೆಯುತ್ತಿದ್ದ ಅಸ್ಪೃಶ್ಯತೆ ವಿರುದ್ಧ ಪ್ರತಿಭಟಿಸಿದ್ದಾರೆ ಎಂದರು.

ಪ್ರೊ. ಬಿ.ಕೃಷ್ಣಪ್ಪ, ಎನ್. ಗಿರಿಯಪ್ಪ, ದೇವನೂರು ಮಹದೇವ




ಸೇರಿ ಪ್ರಮುಖರ ಜೊತೆಗೂಡಿ ದಲಿತ ಸಂಘರ್ಷ ಸಮಿತಿಯನ್ನು ಸ್ಥಾಪಿಸಿದ ಪ್ರಮುಖರಲ್ಲಿ ಒಬ್ಬರಾಗಿದ್ದ ಚಂದ್ರಪ್ರಸಾದ್ ತ್ಯಾಗಿ ವಿಐಎಸ್ಎಲ್ ಕಾರ್ಖಾನೆ ನೌಕರಿಗೆ ರಾಜೀನಾಮೆ ನೀಡಿ ಹಾಸನಕ್ಕೆ ವಾಪಾಸ್ಸಾಗಿ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿದ್ದರು ಎಂದು ಹೇಳಿದರು.

ಸಿದ್ದಿಪುರ ದಲಿತರ ಭೂಮಿ ಹೋರಾಟ, ಚನ್ನಂಗಿಹಳ್ಳಿ ದಲಿತರ ಹೋರಾಟ, ಬಾಳ್ಳುಪೇಟೆ ಭೂ ಹೋರಾಟ, ಕಾಫಿ ಪ್ಲಾಂಟೇಷನ್ ಮಾಲೀಕರ ಒತ್ತುವರಿ ತೆರುವುಗೊಳಿಸಿ ಭೂಮಿ ಇಲ್ಲದವರಿಗೆ ಮತ್ತು ದಲಿತರಿಗೆ ಆ ಭೂಮಿ ಹಂಚಲು ಸಾಕಷ್ಟು ಪ್ರತಿಭಟನೆ ನಡೆಸಿದ್ದರೆಂದು ಸ್ಮರಿಸಿದರು.

ಪ್ರಸ್ತುತ ದಿನಗಳಲ್ಲಿ ದಲಿತ ಸಮುದಾಯ ಅಡಕತ್ತರಿಯಲ್ಲಿ ಸಿಲುಕಿದೆ. ಒಳಮೀಸಲಾತಿ ವಿಷಯದಲ್ಲಿ ಎಡಗೈ ಮತ್ತು ಬಲಗೈ ಎಂದು ಸಮುದಾಯ ಪಡೆಯುವ ವ್ಯವಸ್ಥಿತ ಪಿತೂರಿ ನಡೆಯುತ್ತಿದೆ. ಈ ಸಂದರ್ಭದಲ್ಲಿ ತ್ಯಾಗಿಯವರ ಆಶಯ ಮತ್ತು ಚಿಂತನೆಗಳನ್ನು ಮುಂದುವರೆಸುವ ಮೂಲಕ ದಲಿತರ ನಡುವೆ ಏಕತೆಯನ್ನು ಸ್ಥಾಪಿಸಬೇಕಿದೆಯೆಂದು ಹೇಳಿದರು.

ಮುಖಂಡರಾದ ಎಂ.ಜಿ ಪೃಥ್ವಿ, ಈರೇಶ್ ಹಿರೇಹಳ್ಳಿ, ಅಣಚಿಹಳ್ಳಿ ವೀರಭದ್ರಪ್ಪ, ಎಂ.ಬಿ ಪುಟ್ಟಸ್ವಾಮಿ, ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ಹೆಚ್.ಆರ್.ನವೀನ್ ಕುಮಾರ್, ನಿವೃತ್ತ ಪ್ರಾಂಶುಪಾಲ ಅತ್ನಿ ಕೃಷ್ಣಯ್ಯ, ಪ್ರಮೀಳಾ ಕೊಟ್ಟೂರು, ನಾಯಕರಹಳ್ಳಿ ಮಲ್ಲಯ್ಯ, ಕೆ.ಆರ್ ತಿಮ್ಮಯ್ಯ ಮತ್ತಿತರರು ಮಾತನಾಡಿದರು.

ಬ್ಯಾಂಕ್ ನೌಕರರ ಮುಖಂಡ ಬಿ.ಎ.ಪರಮಶಿವಯ್ಯ, ದಸಂಸ ಉಮೇಶ್, ಜೈ ಭೀಮ್ ಬ್ರಿಗೇಡ್ ರಾಜೇಶ್, ಸಿಐಟಿಯು ಅರವಿಂದ್, ತೋಟೇಶ್ ನಿಟ್ಟೂರು, ರಾಮು ಮತ್ತಿತರರಿದ್ದರು.

# ರಾಷ್ಟ್ರೀಯ ಹೆದ್ದಾರಿ ಜಾಗದಲ್ಲಿ ಸ್ಮಶಾನ: ಆರೋಪ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ತಾಲ್ಲೂಕಿನ ಮಾವನೂರಿನ ಸರ್ಕಾರಿ ಜಾಗದಲ್ಲಿ ಏಕಾಏಕಿ ಖಬರಸ್ತಾನ್ ನಿರ್ಮಿಸಿದ್ದು, ತೆರವುಗೊಳಿಸಬೇಕೆಂದು ಆಗ್ರಹಿಸಿ ಹಿಂದು ಪರ ಸಂಘಟನೆ ಕಾರ್ಯಕರ್ತರು ಶಿರಸ್ತೇದಾರ್‌ಗೆ ಸೋಮವಾರ ಮನವಿ ಸಲ್ಲಿಸಿದರು.

ಗ್ರಾಮದ ಸರ್ವೆ ನಂ. 99ರಲ್ಲಿ ರಾತ್ರೋರಾತ್ರಿ ಮುಸ್ಲಿಮರ ಸ್ಮಶಾನ ತಲೆ ಎತ್ತಿದೆ. ರಾಷ್ಟ್ರೀಯ ಹೆದ್ದಾರಿಗೆ ಸೇರಿರುವ ಜಾಗ ಅದಾಗಿದ್ದು ಕೆರೆ ಸಮೀಪದಲ್ಲೇ ಇರುವುದರಿಂದ ನಿತ್ಯ ನೂರಾರು ಜನರು ಬರುತ್ತಾರೆ. ಜಾನುವಾರುಗಳಿಗೆ ನೀರು ಕುಡಿಸಲು, ಬಟ್ಟೆ ತೊಳೆಯಲು ಗ್ರಾಮಸ್ಥರು ಬರುವ ಜಾಗ ಅದಾಗಿದೆ. ಆದರೆ ಏಕಾಏಕಿ ಖಬರಸ್ತಾನ್ ನಿರ್ಮಿಸಿರುವುದರಿಂದ ತೊಂದರೆಯಾಗಿದೆಯೆಂದರು. ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲೇ ಮುಸ್ಲಿಂ ಸ್ಮಶಾನ



ಮಾಡಲಾಗಿದೆ. ಮುಂದೆ ರಸ್ತೆ ಅಭಿವೃದ್ಧಿ ಸಮಯದಲ್ಲಿ ತೆರವು ಮಾಡದಿದ್ದರೆ ಗಲಭೆ ಸೃಷ್ಟಿಯಾಗುವ ಸಾಧ್ಯತೆಯಿದೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಹಾಕಿರುವ ಕಬ್ಬಿಣದ ಸುರಕ್ಷತಾ ಸರಳುಗಳನ್ನು ಮುರಿದು ದಾರಿ ಮಾಡಿಕೊಂಡಿದ್ದು ಖಂಡನೀಯ ಎಂದರು.

ಮುಸ್ಲಿಮರು ಕೆರೆ ಜಾಗ ಒತ್ತುವರಿ ಮಾಡಿಕೊಂಡಿದ್ದು, ಈ ಸಂಬಂಧ ಸರ್ವೆ ಮಾಡಿ ಹಾಗು ದಾಖಲೆ ಪರಿಶೀಲಿಸಿ ಒತ್ತುವರಿ ತೆರವುಗೊಳಿಸಬೇಕು. ಇಲ್ಲವಾದರೆ ಪ್ರತಿಭಟನೆ ನಡೆಸಲಾಗುವುದೆಂದು ಎಚ್ಚರಿಕೆ ನೀಡಿದರು.

ಹಿಂದು ಸಂಘಟನೆ ಮುಖಂಡರಾದ ರಘು ಸಕಲೇಶಪುರ, ಧರ್ಮೇಶ್, ದುಷ್ಯಂತ್ ಗೌಡ, ಸಂತೋಷ್, ಮಹೇಶ್ ಹಾಜರಿದ್ದರು.

# ಬದಲಿ ಪ್ರಶ್ನೆ ಪತ್ರಿಕೆ ಕೊಟ್ಟು ಮೇಲ್ವಿಚಾರಕರ ಎಡವಟ್ಟು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಪರೀಕ್ಷಾ ಕೇಂದ್ರದ ಅಧಿಕಾರಿಗಳ ಮತ್ತು ಮೇಲ್ವಿಚಾರಕರ ಎಡವಟ್ಟಿನಿಂದ ದ್ವಿತೀಯ ಪಿಯು ಪರೀಕ್ಷೆಯನ್ನು ಒಂದು ಗಂಟೆ ವ್ಯತ್ಯಾಸದಲ್ಲಿ ಕೆಲ ವಿದ್ಯಾರ್ಥಿಗಳು ಎರಡೆರೆಡು ಪ್ರಶ್ನೆ ಪತ್ರಿಕೆಗೆ ಉತ್ತರ ಬರೆದ ಘಟನೆ ಪಟ್ಟಣದ ಸರ್ಕಾರಿ ಮಹಿಳಾ ಪದವಿ ಪೂರ್ವ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ಸೋಮವಾರ ನಡೆದಿದೆ.

ಈಗಾಗಲೇ ಕಳೆದ ಕೆಲ ದಿನಗಳಿಂದ ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ವಾರ್ಷಿಕ ಪರೀಕ್ಷೆ ನಡೆಯುತ್ತಿದೆ. ಆದರೆ ಸೋಮವಾರ ಅಂತಿಮವಾಗಿ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಸೈನ್ಸ್ ಪರೀಕ್ಷೆಗಾಗಿ ಕೆಲವು ವಿದ್ಯಾರ್ಥಿಗಳಿಗೆ ಪಟ್ಟಣದ ಸರ್ಕಾರಿ ಮಹಿಳಾ ಪದವಿ ಪೂರ್ವ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ಕೊಠಡಿ ಮೀಸಲಾಗಿತ್ತು. ಎಲ್ಲ ಪರೀಕ್ಷೆಗಳನ್ನು ಖುಷಿ ಖುಷಿಯಿಂದಲೇ ಬರೆದಿದ್ದ ವಿದ್ಯಾರ್ಥಿಗಳು ಸೋಮವಾರವೂ ಸಹ ಪರೀಕ್ಷೆ ಬರೆಯಲು ಪುನಾರಾವರ್ತಿತ ವಿದ್ಯಾರ್ಥಿಗಳೊಂದಿಗೆ ಕುಳಿತಿದ್ದರು. ಆದರೆ ಬೆಳಗ್ಗೆ ಪರೀಕ್ಷೆ ಪ್ರಾರಂಭವಾಗುತಿದ್ದಂತೆಯೇ ಎಲ್ಲ ವಿದ್ಯಾರ್ಥಿಗಳಿಗೂ ಕೊಡುವಂತೆಯೇ ರೆಗ್ಯುಲರ್ ವಿದ್ಯಾರ್ಥಿಗಳಿಗೂ ಪ್ರಶ್ನೆ ಪತ್ರಿಕೆಗಳನ್ನು ಕೊಡಲಾಗಿದೆ. ಆದರೆ ಇದರಲ್ಲಿ ಪಟ್ಟಣದ ಸರ್ವೋದಯ ಕಾಲೇಜಿನ 3 ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಮೂರು ವಿದ್ಯಾರ್ಥಿಗಳು ಸಹ ಇದ್ದರು. ಈ ಸಂದರ್ಭ ಹಳೆಯ ಮತ್ತು ಹೊಸ ಪಠ್ಯಕ್ರಮಗಳಲ್ಲಿ ಕೆಲ ಅಧ್ಯಾಯದಲ್ಲಿ ಒಂದೇ ರೀತಿಯಾಗಿದ್ದರಿಂದ ವಿದ್ಯಾರ್ಥಿಗಳು ಪ್ರಾರಂಭದಲ್ಲಿ ಇಂದಿನ ಪ್ರಶ್ನೆ ಪತ್ರಿಕೆ ಕಷ್ಟವಾಗಿರಬಹುದು ಎಂದು ಮೂರು ಗಂಟೆ ಕಾಲ ಪರೀಕ್ಷೆ ಬರೆದು ಹೊರಬಂದು ಬೇರೆ ಮಕ್ಕಳ ಬಳಿಯಿದ್ದ ಪ್ರಶ್ನೆ ಪತ್ರಿಕೆ ನೋಡಿ ಆತಂಕಕ್ಕೊಳಗಾಗಿ ನಾವು ತಪ್ಪಾದ ಪ್ರಶ್ನೆ ಪತ್ರಿಕೆಗೆ ಉತ್ತರ ಬರೆದಿದ್ದೇವೆಂದು ಕೊಠಡಿಯ ಮೇಲ್ವಿಚಾರಕರನ್ನು ಪ್ರಶ್ನಿಸಿದ್ದಾರೆ.

ಅದರಿಂದ ಗಾಬರಿಗೊಂಡ ಪರೀಕ್ಷಾ ಕೇಂದ್ರದ ಅಧಿಕಾರಿಗಳು ಮತ್ತು ಮೇಲ್ವಿಚಾರಕರು ಪರೀಕ್ಷೆ ಬರೆದು ಹೊರ ಬಂದಿದ್ದ ವಿದ್ಯಾರ್ಥಿಗಳನ್ನು ಪುನ: ಪರೀಕ್ಷಾ ಕೊಠಡಿಯೊಳಕ್ಕೆ ಕರೆದು ರೆಗ್ಯುಲರ್ ವಿದ್ಯಾರ್ಥಿಗಳ ಪ್ರಶ್ನೆ ಪತ್ರಿಕೆಗೆ ಉತ್ತರ ಬರೆಯುವಂತೆ ಹೇಳಿ ಕೇವಲ 45 ನಿಮಿಷಗಳ ಕಾಲಾವಕಾಶ ನೀಡಿ ಉತ್ತರ ಪತ್ರಿಕೆಯನ್ನು ವಾಪಸ್ ಪಡೆದಿದ್ದಾರೆನ್ನಲಾಗಿದೆ. ಮೂರು ಗಂಟೆ ಸಮಯದಲ್ಲಿ ಪ್ರಶ್ನೆಪತ್ರಿಕೆಗೆ ಉತ್ತರ ಬರೆಯ ಬೇಕಾದ ಕಡಿಮೆ ಸಮಯದಲ್ಲಿ ಬರೆಯುವುದು ಸಾಧ್ಯವಾಗದೆ ವಿದ್ಯಾರ್ಥಿಗಳು ಹೆಚ್ಚು ಸಮಯ ಬೇಕೆಂದರೂ ಕೇಳದೆ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡಿದ್ದಾರೆ ಎಂಬ ಆರೋಪ ಕೇಳಿಬಂದಿದೆ.

ಸರ್ವೋದಯ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಮಲ್ಲೇಶಗೌಡ ಮಾತನಾಡಿ, ಪರೀಕ್ಷೆಗೆ ಮೊದಲು ಪ್ರತಿಕಾಲೇಜಿನಿಂದ ಎಷ್ಟು ವಿದ್ಯಾರ್ಥಿಗಳು ಹಳೆಯ ಪಠ್ಯಕ್ರಮ ಹಾಗೂ ಹೊಸ ಪಠ್ಯಕ್ರಮದಲ್ಲಿ ಪರೀಕ್ಷೆ ಬರೆಯುತ್ತಿದ್ದಾರೆ ಎಂಬ ಮಾಹಿತಿ ಆಧರಿಸಿ ಪ್ರಶ್ನೆಪತ್ರಿಕೆಗಳನ್ನು ಕಳುಹಿಸಲಾಗುತ್ತದೆ. ಆದರೆ ಪರೀಕ್ಷಾ ಕೇಂದ್ರದಲ್ಲಿ ಪ್ರಶ್ನೆ ಪತ್ರಿಕೆ ಕೊಡುವ ವೇಳೆ ಮೇಲ್ವಿಚಾರಕರು ಹಳೆಯ ಪಠ್ಯಕ್ರಮದ ವಿದ್ಯಾರ್ಥಿಗಳೇ ಎಂದು ಊಹಿಸಿ ಹೊಸ ಪಠ್ಯಕ್ರಮದ ವಿದ್ಯಾರ್ಥಿಗಳಿಗೂ ಹಳೆಯ ಪ್ರಶ್ನೆ ಪತ್ರಿಕೆ ನೀಡಿದ್ದಾರೆ. ಆದರೆ ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆ ಕಷ್ಟವಾಗಿದೆ ಎಂದುಕೊಂಡೆ ಪರೀಕ್ಷೆ ಬರೆದು ಹೊರಬಂದು ಇತರರೊದಿಗೆ ಪ್ರಶ್ನೆಪತ್ರಿಕೆ ಪರಿಶೀಲಿಸಿದಾಗ ಸತ್ಯ ತಿಳಿದು ನಿರಾಶೆಗೊಂಡಿದ್ದಾರೆ. ಉತ್ತಮ ಅಂಕಗಳ ನಿರೀಕ್ಷೆಯಲ್ಲಿದ್ದ ವಿದ್ಯಾರ್ಥಿಗಳಭವಿಷ್ಯಕ್ಕೆದೊಡ್ಡ ಹೊಡೆತ ನೀಡಿದ್ದು, ವಿದ್ಯಾರ್ಥಿಗಳಿಗೆ ನ್ಯಾಯ ಹಾಗೂ ಇದಕ್ಕೆ ಕಾರಣರಾದವರ ವಿರುದ್ಧಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

# ಭಾರತದಲ್ಲಿ ದತ್ತು ಪ್ರಕ್ರಿಯೆಗೆ ಶತಮಾನಗಳ ಇತಿಹಾಸ

## ಕಾನೂನು ಪಾಲಿಸದಿದ್ದರೆ ಸಂಕಷ್ಟ ಖಚಿತ | ಡಿಸಿ ಕೆ.ಎಸ್.ಲತಾಕುಮಾರಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸಂತಾನ ಭಾಗ್ಯವಿಲ್ಲದ ಪೋಷಕರು ತಮ್ಮ ವಾರಸುದಾರರನ್ನಾಗಿ ರಕ್ತ ಸಂಬಂಧಿಗಳಲ್ಲದ ಮಕ್ಕಳನ್ನು ಪಡೆಯುವುದು ಪೂರ್ವ ಕಾಲದಿಂದ ಚಾಲ್ತಿಯಲ್ಲಿದೆ. ಪ್ರಸ್ತುತ ದಿನಗಳಲ್ಲಿ ಅದು ಕಾನೂನಿನ ರೂಪ ಪಡೆದಿದೆ ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಪೊಲೀಸ್ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಸೋಮವಾರ ನಡೆದ ದತ್ತು ಕಾಯ್ದೆ ಕುರಿತು ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ತಂದೆ-ತಾಯಿ ಇಲ್ಲದ ಜೀವನವನ್ನು ಯಾವ ಮಕ್ಕಳು ನಡೆಸುವುದು ಬೇಡ, ಅನಾಥ ಪ್ರಜ್ಞೆ ಕಾಡದಂತೆ ಮಕ್ಕಳನ್ನು ಬೆಳೆಸುವುದು ಪ್ರತಿಯೊಬ್ಬರ ಜವಾಬ್ದಾರಿ. ಮಕ್ಕಳನ್ನು ದತ್ತು ಪಡೆಯುವ ಪ್ರಕ್ರಿಯೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಮಕ್ಕಳಾಗದ ರಾಜ ಮಹಾರಾಜರು ಸಹ ದತ್ತು ಪಡೆದು ಸಾಮ್ರಾಜ್ಯಗಳನ್ನೇ ಬಿಟ್ಟುಕೊಡುತ್ತಿದ್ದರು. ಆದರೆ ಬ್ರಿಟಿಷರ ಡಾಲ್ ಹೌಸಿ ಎಂಬ ಅಧಿಕಾರಿ ದತ್ತು ಪುತ್ರರಿಗೆ ಹಕ್ಕಿಲ್ಲ ಎಂಬ ಕಾನೂನು ಜಾರಿಗೊಳಿಸಿದ್ದರಿಂದ ದೇಶದಲ್ಲಿ ದಂಗೆಗಳಾದವು. ಝಾನ್ಸಿ ರಾಣಿ ಲಕ್ಷ್ಮಿಬಾಯಿ ಸೇರಿ ಅನೇಕ ಹೋರಾಟಗಾರರು ಬ್ರಿಟಿಷರ ನೀತಿ ವಿರುದ್ಧ ಸಮರ ಸಾರಿದರು. ಸ್ವಾತಂತ್ರ್ಯ ಹೋರಾಟದಲ್ಲಿ ಇದು ಪ್ರಮುಖ ಪಾತ್ರ ವಹಿಸಿತು ಎಂದರು.



### ತಾಯಿಯಾಗುವುದೆಂದರೆ ರಂಗ ಪ್ರಯೋಗ

**ದತ್ತು ಸ್ವೀಕಾರ ಅರಿವು ಕಾರ್ಯಕ್ರಮದಲ್ಲಿ ರಂಗಭೂಮಿ ಕಲಾವಿದೆ ಪೂಜಾ ರಘು ನಂದನ್ ಅವರು ತಾಯಿಯಾಗುವುದೆಂದರೆ ಏಕವ್ಯಕ್ತಿ ರಂಗ ಪ್ರಯೋಗದ ಮೂಲಕ ಗಮನ ಸೆಳೆದರು.**

**ಸಂತಾನ ಭಾಗ್ಯವಿಲ್ಲದ ತಾಯಿ ಅನುಭವಿಸುವ ನೋವು, ಯಾತನೆ ಹಾಗು ಸಾಮಾಜಿಕ ನಿಂದನೆಯನ್ನು ಪ್ರತಿಬಿಂಬಿಸುವ ನಾಟಕ ಮನೋಜ್ಞವಾಗಿ ಮೂಡಿಬಂತು. ಪ್ರದರ್ಶನದ ಬಳಿಕ ಸಾರ್ವಜನಿಕರು ಅಭಿಪ್ರಾಯ ಹಂಚಿಕೊಂಡರು.**

**ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ಧರಣಿಕುಮಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಅನಿಲ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ದಿಲೀಪ್, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಅನುಪಮಾ, ಜಿಲ್ಲಾ ಪಂಚಾಯಿತಿಯ ಸುನಿತಾ, ಪವಿತ್ರಾ ಹಾಜರಿದ್ದರು. ಮಕ್ಕಳ ರಕ್ಷಣಾ ಘಟಕದ ಕಾಂತರಾಜು ಕಾರ್ಯಕ್ರಮ ನಿರೂಪಿಸಿದರು.**

ಕಾರಾ ಎಂಬ ಕೇಂದ್ರ ಸರ್ಕಾರದ ಸಂಸ್ಥೆಯೊಂದು ಮಕ್ಕಳ ದತ್ತು ಪ್ರಕ್ರಿಯೆಯನ್ನು ನೋಡಿಕೊಳ್ಳುತ್ತದೆ. ಮಕ್ಕಳಾಗದವರು ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಿ ನಿಯಮಾನುಸಾರ ಮಕ್ಕಳನ್ನು ದತ್ತು ಸ್ವೀಕರಿಸಬಹುದು. ನಾಲ್ಕರಿಂದ ಐದು ವರ್ಷಗಳ ಬಳಿಕ ಮಕ್ಕಳು ಪೋಷಕರ ಸುಪರ್ದಿಗೆ ಬರುತ್ತಾರೆ ಎಂದರು.

ಎರಡ್ಮೂರು ದಶಕಗಳ ಹಿಂದೆ ಭ್ರೂಣ ಹತ್ಯೆ ವಿಪರೀತವಾಗಿತ್ತು. ಅದರ ಪರಿಣಾಮವನ್ನು ಲಿಂಗ ಅಸಮಾನತೆ ಮೂಲಕ ಇಂದು ಕಾಣುತ್ತಿದ್ದೇವೆ. ಆದ್ದರಿಂದ ಯಾರೂ ಕೂಡ ಹೆಣ್ಣಿನ ಬಗ್ಗೆ ತಾತ್ಸಾರ ತೋರಬಾರದೆಂದು ಸಲಹೆ ನೀಡಿದರು.

> **ಪೊಲೀಸರು ಇಲ್ಲದ ಒಂದು ದಿನವನ್ನು ಊಹಿಸಿಕೊಳ್ಳುವುದು ಯಾರಿಂದಲೂ ಸಾಧ್ಯವಿಲ್ಲ. ಪೊಲೀಸರು ಇಲ್ಲದೆ ಯಾರೂ ನೆಮ್ಮದಿಯಾಗಿ ಇರಲು ಆಗುವುದಿಲ್ಲ. ಕಾನೂನು ಪಾಲಿಸುವುದು ಪೊಲೀಸರ ಜವಾಬ್ದಾರಿ. ಅದು ಕೆಲವರಿಗೆ ಒಳಿತು ಮತ್ತೊಬ್ಬರಿಗೆ ನಷ್ಟವುಂಟು ಮಾಡುತ್ತದೆ. ಆದರೂ ನಾವು ಹೆಚ್ಚು ದ್ವೇಷಕ್ಕೆ ಒಳಗಾಗುತ್ತೇ.**
>
> **- ಶ್ರೀನಿಧಿ, ಎಎಸ್ಪಿ**

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿಧಿ ಮಾತನಾಡಿ, ಬಾಲ್ಯ ವಿವಾಹಕ್ಕೆ ಕಡಿವಾಣ ಹಾಕದಿದ್ದರೆ ಭಾರೀ ಸಮಸ್ಯೆ ಎದುರಿಸಬೇಕಾಗುತ್ತದೆ. ಅಪ್ರಾಪ್ತರಿಗೆ ಮದುವೆ ಮಾಡುವುದರಿಂದ ಬೇಗ ಗರ್ಭಿಣಿಯಾಗುತ್ತಾರೆ. ಕಾನೂನು ಪ್ರಕಾರ ಅದು ಶಿಕ್ಷಾರ್ಹ ಅಪರಾಧ. ಈ ಕಾಯ್ದೆಯಡಿ ಆರೋಪಿಗಳೆಲ್ಲರನ್ನೂ ಬಂಧಿಸಬೇಕಾಗುತ್ತದೆ. ಆ ರೀತಿ ಕಾನೂನು ಜಾರಿಗೆ ಮುಂದಾದರೆ ಇಡೀ ಸಮಾಜ ಜೈಲಿನಲ್ಲಿರಬೇಕಾಗುತ್ತದೆ. ಈ ನಿಟ್ಟಿನಲ್ಲಿ ಸಾರ್ವಜನಿಕರು ಚಿಂತನೆ ನಡೆಸಬೇಕಿದೆ ಎಂದರು.

ಭಿಕ್ಷಾಟನೆ, ಬಾಲ ಕಾರ್ಮಿಕ ಪದ್ಧತಿ, ಲೈಂಗಿಕ ದೌರ್ಜನ್ಯ, ಬಾಲ್ಯ ವಿವಾಹ, ಪರಿತ್ಯಕ್ತ ಮಕ್ಕಳು, ಕಾಣೆಯಾದವರ ಪತ್ತೆ, ಮಾದಕ ವ್ಯಸನಿಗಳ ಬಂಧನ ಹೀಗೆ ಎಲ್ಲಾ ಕಡೆ ಪೊಲೀಸರು ಇರಬೇಕು. ಸಮಾಜದಲ್ಲಿ ಪೊಲೀಸರು ಎಂದರೆ ಕರಿಬೇವು ಸೊಪ್ಪು ಇದ್ದ ಹಾಗೆ. ಅದು ಇಲ್ಲದೆ ಅಡುಗೆ ಆಗುವುದಿಲ್ಲ, ಆದರೆ ಯಾರೂ ತಿನ್ನುವುದಿಲ್ಲವೆಂದರು.

# ಬಿಸಿಲ ಬೇಗೆ: ಜಾನುವಾರುಗಳ ಮೇವಿಗೆ ಸದ್ಯಕ್ಕಿಲ್ಲ ಸಮಸ್ಯೆ

## 36 ವಾರಕ್ಕಾಗುವಷ್ಟು ಮೇವು ದಾಸ್ತಾನು | ಪಶುಪಾಲನಾ ಇಲಾಖೆ ಮುನ್ನೆಚ್ಚರಿಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಬಿಸಿಲ ಬೇಗೆ ಹೆಚ್ಚುತ್ತಲೇ ಇದ್ದು ಜಾನುವಾರುಗಳಿಗೆ ಮೇವು ಹಾಗು ಕುಡಿಯುವ ನೀರಿಗೆ ತತ್ವಾರ ಎದುರಾಗುವ ಸಾಧ್ಯತೆಯಿದೆ.

ಮುನ್ನೆಚ್ಚರಿಕೆ ಕ್ರಮವಾಗಿ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಅಧಿಕಾರಿಗಳ ಸಭೆ ನಡೆಸಿ ಮೇವಿನ ಸಂಗ್ರಹಕ್ಕೆ ಆದ್ಯತೆ ನೀಡುವಂತೆ ಸೂಚನೆ ನೀಡಿದ್ದಾರೆ. ಗ್ರಾಮೀಣ ಭಾಗಗಳಲ್ಲಿ ನಿರ್ಮಿಸಿರುವ ತೊಟ್ಟಿಗಳಲ್ಲಿ ಸದಾಕಾಲ ನೀರು ಲಭ್ಯವಿರುವಂತೆ ಗ್ರಾಮ ಪಂಚಾಯಿತಿಗಳಿಗೆ ಸೂಚನೆ ನೀಡಲಾಗಿದೆ. ಜಿಲ್ಲಾಡಳಿತದ ಕಟ್ಟುನಿಟ್ಟಿನ ಸೂಚನೆ ಹಿನ್ನೆಲೆಯಲ್ಲಿ ಪಶುಪಾಲನಾ ಇಲಾಖೆ ಅಧಿಕಾರಿಗಳು ಮೇವು ಕೊರತೆ ಉಂಟಾಗದಂತೆ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿವೆ. ಜಿಲ್ಲೆಯಲ್ಲಿ ಸಾಕಷ್ಟು ಮೇವು ಸಂಗ್ರಹಣೆ ಮಾಡಲಾಗಿದ್ದು, ರೈತರು ಹಾಗು ಜಾನುವಾರು ಪಾಲಕರು ಆತಂಕಪಡುವ ಅಗತ್ಯವಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಿಲ್ಲೆಯಲ್ಲಿ 5,61 ಲಕ್ಷ ಜಾನುವಾರು ಹಾಗೂ 3,31 ಲಕ್ಷ ಕುರಿ, ಮೇಕೆಗಳಿವೆ. ಅತಿಹೆಚ್ಚು ರಾಸುಗಳನ್ನು ಹೊಂದಿರುವ ಪಟ್ಟಿಯಲ್ಲಿ ಬೆಳಗಾವಿ ನಂತರ ಎರಡನೇ ಸ್ಥಾನವನ್ನು ಹಾಸನ ಪಡೆದಿದೆ. ಹೈನುಗಾರಿಕೆಗೆ ಜಾನುವಾರುಗಳು ಸಹಕಾರಿಯಾಗಿದ್ದು, ರೈತರ ಆರ್ಥಿಕ ಉತ್ತೇಜನಕ್ಕೆ ನೆರವಾಗಿದೆ. ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಮೇವು ಬ್ಯಾಂಕ್‌ಗಳನ್ನು ಸ್ಥಾಪಿಸಿ ಒಣಗಿದ ಹುಲ್ಲು ಹಾಗು ಹಸಿರು ಮೇವನ್ನು ಸಂಗ್ರಹಿಸಲಾಗಿದೆ. ಅಗತ್ಯವಿದ್ದರೆ ರೈತರಿಗೆ ಕಡಿಮೆ ದರದಲ್ಲಿ ಮೇವು ವಿತರಿಸಲು ವ್ಯವಸ್ಥೆ ಮಾಡಲಾಗಿದೆ. ಪಶುಪಾಲನಾ ಇಲಾಖೆಯ ಅಧಿಕಾರಿಗಳು ಗ್ರಾಮ ಮಟ್ಟದಲ್ಲಿ ಪರಿಶೀಲನೆ ನಡೆಸಿ ಮೇವು ಲಭ್ಯತೆ ಬಗ್ಗೆ ಮಾಹಿತಿ ಸಂಗ್ರಹಿಸಿದ್ದು, ತುರ್ತು ಪರಿಸ್ಥಿತಿ ಎದುರಾದರೆ ತಕ್ಷಣ ಕ್ರಮ ಕೈಗೊಳ್ಳಲು ಸಿದ್ಧತೆ ಮಾಡಿಕೊಂಡಿದ್ದಾರೆ.



### 36 ವಾರಗಳಿಗೆ ಸಮಸ್ಯೆ ಇಲ್ಲ

ಬೇಸಿಗೆ ಆರಂಭಕ್ಕೂ ಮೊದಲೇ ಪಶುಪಾಲನಾ ಇಲಾಖೆ ಅಧಿಕಾರಿಗಳು ಈ ಬಗ್ಗೆ ವರದಿ ತರಿಸಿಕೊಂಡಿದ್ದು ಮುಂದಿನ 36 ವಾರಗಳಿಗೆ ಮೇವಿಗೆ ಕೊರತೆಯಾಗದಂತೆ ಎಚ್ಚರ ವಹಿಸಲಾಗಿದೆ. ಜಿಲ್ಲೆಯಲ್ಲಿ ಮೇವು ಬೆಳೆ ಬೆಳೆಸಲು ರೈತರಿಗೆ ಉತ್ತೇಜನ ನೀಡುವ ಕಾರ್ಯಕ್ರಮಗಳನ್ನೂ ಹಮ್ಮಿಕೊಳ್ಳಲಾಗಿದ್ದು, ಜಾನುವಾರುಗಳ ಆರೋಗ್ಯ ಕಾಪಾಡಲು ಪಶುವೈದ್ಯಕೀಯ ಶಿಬಿರಗಳನ್ನು ನಡೆಸುವ ಯೋಜನೆಯೂ ರೂಪಿಸಲಾಗಿದೆ.

### 5 ಸಾವಿರ ಮೇವಿನ ಬೀಜ ಕಿಟ್‌ಗೆ ಪ್ರಸ್ತಾವನೆ

ಬೋರವೆಲ್ ಇರುವ ರೈತರು, ಸರ್ಕಾರಿ ಫಾರ್ಮ್ ಹೌಸ್, ಅರಣ್ಯ ಪ್ರದೇಶಗಳಲ್ಲಿ ಮೇವು ಬೆಳೆಯಲು ಕ್ರಮ ವಹಿಸಲಾಗಿದೆ. 5 ಸಾವಿರ ಮೇವಿನ ಬೀಜಗಳ ಕಿರು ಪೊಟ್ಟಣ ಕಲ್ಪಿಸುವಂತೆ ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆದರೆ, ಈ ಬಾರಿ ಮುಸುಕಿನ ಜೋಳದ ಬೀಜಗಳನ್ನು ಪಡೆಯುತ್ತಿಲ್ಲ. ಕಳೆದ ವರ್ಷ ಜೋಳಕ್ಕೆ ಬಿಳಿಸುಳಿ ರೋಗ ತಗುಲಿ ವ್ಯಾಪಕ ಹಾನಿಯುಂಟಾದ್ದರಿಂದ ಬದಲಿಗೆ ಮಲ್ಟಿ ಕಟ್ ಸರ್ಗಂ (ಹಲವಾರು ಬಾರಿ ಕತ್ತರಿಸಿ ಮೇವು ಪಡೆಯಬಹುದಾದ ಜೋಳದ ಜಾತಿ)ಗೆ ಬೇಡಿಕೆ ಸಲ್ಲಿಸಲಾಗಿದೆ. ಈ ಬೆಳೆ ಕೈಗೊಂಡರೆ ಅಂದಾಜು ನಾಲ್ಕರಿಂದ ಐದು ಬಾರಿ ಮೇವು ಪಡೆಯಬಹುದು. ಒಂದು ಎಕರೆಗೆ ಸುಮಾರು 35 ರಿಂದ 40 ಟನ್ ಹಸಿರುವ ಮೇವು ದೊರೆಯುವುದರಿಂದ ಇಲಾಖೆ ಈ ಬೆಳೆಗೆ ಪ್ರಾಶಸ್ತ್ಯ ನೀಡಿದೆ.

> ಜಿಲ್ಲೆಯಲ್ಲಿ ಜಾನುವಾರುಗಳ ಮೇವು ಹಾಗು ಕುಡಿಯುವ ನೀರಿಗೆ ಸಮಸ್ಯೆಯಿಲ್ಲ. ಮುಂಜಾಗ್ರತಾ ಕ್ರಮವಾಗಿ 5 ಸಾವಿರ ಮೇವಿನ ಬೀಜಗಳ ಕಿಟ್ ಕಲ್ಪಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಜಿಲ್ಲೆಯ ರೈತರು ಆತಂಕಪಡುವ ಅಗತ್ಯವಿಲ್ಲ.
>
> – ಬಿ.ಕೆ.ರಮೇಶ್,
> ಪಶುಪಾಲನಾ ಇಲಾಖೆ ಉಪನಿರ್ದೇಶಕ

### ಪಶು ಸಖಿಯರಿಂದ ಸಮೀಕ್ಷೆ

ಸದ್ಯದ ಪರಿಸ್ಥಿತಿಯಲ್ಲಿ ಮುಂದಿನ 3 ತಿಂಗಳ ವರೆಗೆ ಮೇವಿಗೆ ಕೊರತೆಯಿಲ್ಲ. ಅಷ್ಟರೊಳಗೆ ಮಳೆಯಾಗದೆ ಹುಲ್ಲು ಬೆಳೆಯದೆ ಇದ್ದರೆ ಪರಿಸ್ಥಿತಿ ಬಿಗಡಾಯಿಸಬಹುದು. ಹೀಗಾಗಿ ಪಶುಪಾಲನಾ ಇಲಾಖೆಯ ಪಶು ಸಖಿಯರಿಗೆ ಗ್ರಾಮಗಳಲ್ಲಿ ಸಮೀಕ್ಷೆ ನಡೆಸುವಂತೆ ಸೂಚಿಸಲಾಗಿದೆ. ಯಾವುದಾದರೂ ಗ್ರಾಮದಲ್ಲಿ ಮೇವಿಗೆ ಕೊರತೆ ಇದ್ದರೆ ಅಲ್ಲಿಗೆ ಮೇವು ಬೀಜ ಕಿಟ್ ವಿತರಿಸಲು ಕ್ರಮ ಕೈಗೊಳ್ಳಲಾಗಿದೆ. ಜಾನವಾರುಗಳಿಗೆ ಖಾಯಿಲೆಗಳು ತಗುಲದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಗ್ರಾಮ ಪಂಚಾಯಿತಿ ಸಹಕಾರದಡಿ ಕೈಗೊಳ್ಳಲಾಗುತ್ತಿದೆ.

# ವೀರಾಂಜನೇಯಸ್ವಾಮಿ ದೇಗುಲ ಲೋಕಾರ್ಪಣೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ತಾಲ್ಲೂಕಿನ ದೊಡ್ಡಮಗ್ಗೆ ಹೋಬಳಿ ಮುದ್ದನಹಳ್ಳಿ ಗ್ರಾಮದಲ್ಲಿ ಶ್ರೀ ವೀರಾಂಜನೇಯಸ್ವಾಮಿ ದೇವಾಲಯ ಭಾನುವಾರ ಲೋಕಾರ್ಪಣೆಗೊಂಡಿತು.

ದೇವಸ್ಥಾನದಲ್ಲಿ ಶ್ರೀ ಆಂಜನೇಯಸ್ವಾಮಿ ಮೂರ್ತಿಗೆ ವಿಶೇಷವಾಗಿ ಅಲಂಕರಿಸಲಾಗಿತ್ತು. ಹೋಮ, ಹವನ ಹಾಗು ವಿಶೇಷ ಪೂಜಾ ವಿಧಾನಗಳು ವಿಧಿವತ್ತಾಗಿ ನಡೆದವು. ಭಕ್ತರು ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಪ್ರಸಾದ ಸ್ವೀಕರಿಸಿದರು.


ತಹಶೀಲ್ದಾರ್ ಕೆ.ಸಿ.ಸೌಮ್ಯ, ಕೆಸವತ್ತೂರು ಮಠದ ಶ್ರೀ ಬಸವರಾಜೇಂದ್ರ ಸ್ವಾಮೀಜಿ, ಕಾಂಗ್ರೆಸ್ ಮುಖಂಡ ಎಂ.ಟಿ. ಕೃಷ್ಣೇಗೌಡ ಮತ್ತಿತರರಿದ್ದರು.

# ರಸ್ತೆಯಲ್ಲಿ ಅಡ್ಡಗಟ್ಟಿ ಕಾರ್ಮಿಕರ ಮೇಲೆ ಹಲ್ಲೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರಸ್ತೆಯಲ್ಲಿ ನಡೆದು ಹೋಗುತ್ತಿದ್ದ ಯುವಕರ ಮೇಲೆ ಐವರು ಕಳ್ಳರು ದಾಳಿ ಮಾಡಿ ರಿಪೀಸ್ ಪಟ್ಟಿಯಿಂದ ಹೊಡೆದು ಗಂಭೀರ ಗಾಯಗೊಳಿಸಿರುವ ಘಟನೆ ಹನುಮಂತಪುರದಲ್ಲಿ ನಡೆದಿದೆ. ಹಿಮತ್ ಸಿಂಗ್ ಕಾ ಲಿನೆನ್ಸ್ ಗಾರ್ಮೆಂಟ್ಸ್ ಫ್ಯಾಕ್ಟರಿಯ ಕಾರ್ಮಿಕರಾದ ಕಿರಣ್ ಘೋಷ್ ಹಾಗೂ ಸೌರವ್ ಘೋಷ್ ಗಾಯಾಳುಗಳು. ಮಾ. 13ರ ರಾತ್ರಿ ಪಿರುಮೇನಹಳ್ಳಿಯ ತಮ್ಮ ರೂಮ್‌ನಿಂದ ದಿನಸಿ ಸಾಮಾಗ್ರಿ ತರಲೆಂದು ಹನುಮಂತಪುರಕ್ಕೆ ತೆರಳಿದ್ದ ಅವರು ರಸ್ತೆಬದಿ ನಡೆದುಕೊಂಡು ಬರುತ್ತಿದ್ದಾಗ ಎರಡು ಸ್ಪ್ಲೆಂಡರ್ ಬೈಕ್‌ನಲ್ಲಿ ಬಂದ ಐವರು ಅಪರಿಚಿತರು ಅಡ್ಡಗಟ್ಟಿ ಹಣ ಹಾಗು ಮೊಬೈಲ್ ಕೊಡುವಂತೆ ಒತ್ತಾಯಿಸಿದ್ದಾರೆ. ಅದಕ್ಕೆ ಇಬ್ಬರೂ ಪ್ರತಿರೋಧ ತೋರಿದ್ದರಿಂದ ಮರದ ರೀಪೀಸ್ ಪಟ್ಟಿಯಿಂದ ಬಲವಾಗಿ ಹೊಡೆದಿದ್ದಾರೆ. ಈ ವೇಳೆ ಫ್ಯಾಕ್ಟರಿಯ ಮತ್ತೊಬ್ಬ ಕಾರ್ಮಿಕ ಬರುತ್ತಿದ್ದಂತೆ ಬೈಕ್ ಹತ್ತಿ ಓಡಿ ಹೋಗಿದ್ದಾರೆ. ಎರಡು ಮೊಬೈಲ್, 1030 ರೂ.ಗಳನ್ನು ದೋಚಲಾಗಿದೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಪತ್ರಕರ್ತರ ರಾಜ್ಯ ಸಮ್ಮೇಳನ ಮುಂದೂಡಿಕೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಬೀದರ್‌ನಲ್ಲಿ ಮಾ. 28 ಮತ್ತು 29ರಂದು ನಿಗದಿಯಾಗಿದ್ದ ರಾಜ್ಯ ಮಟ್ಟದ ಪತ್ರಕರ್ತರ 40ನೇ ಸಮ್ಮೇಳನವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕೋರಿಕೆ ಮೇರೆಗೆ ಏ. 11 ಮತ್ತು 12ಕ್ಕೆ ಮುಂದೂಡಿಕೆಯಾಗಿದೆ ಎಂದು ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಎಚ್.ಬಿ. ಮದನಗೌಡ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಮ್ಮೇಳನವು ಸಭೆ ಸಮಾರಂಭ ಮಾತ್ರವಲ್ಲ. ರಾಜ್ಯದ ಎಲ್ಲಾ ಪತ್ರಕರ್ತರು ಒಂದೆಡೆ ಸೇರಿ ಸಂಘ ಬೆಳೆದು ಬಂದ ಹಾದಿ ಮತ್ತು ಮುಂದೆ ನಡೆಯಬೇಕಾದ ದಾರಿಯ ಕುರಿತು ಚಿಂತನಾ ಮಂಥನ ಮಾಡುವುದರ ಜೊತೆಗೆ ಕಾರ್ಯನಿರತ ಪತ್ರಕರ್ತರ ಸಂಘ ಮತ್ತು ಸದಸ್ಯರ ಈತ ಕಾದುಕೊಳ್ಳುವ ನಿಟ್ಟಿನಲ್ಲಿ ತೀರ್ಮಾನಗಳು ತೆಗೆದುಕೊಳ್ಳುವುದರಿಂದ ಸಮ್ಮೇಳನವು ಪತ್ರಕರ್ತರ ಶಕ್ತಿ ಪ್ರದರ್ಶನ ಪ್ರತಿಬಿಂಬವಾಗಿರುತ್ತದೆ. ಹಾಗಾಗಿ ರಾಜ್ಯದ ಎಲ್ಲಾ ಕಾರ್ಯನಿರತ ಪತ್ರಕರ್ತರು ಈ ಮಹಾ ಸಮ್ಮೇಳನದಲ್ಲಿ ಪಾಲ್ಗೊಳ್ಳುವಂತೆ ಕರೆ ನೀಡಿದರು.

ಡಿ.ವಿ.ಗುಂಡಪ್ಪನ ಹಾಗೂ ಅನೇಕ ಮಹನೀಯ ಹಿರಿಯ ಪತ್ರಕರ್ತರು ಮುನ್ನಡೆಸಿ ಕೊಂಡು ಬಂದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಇಂದು ಸದೃಢವಾಗಿ ಬೆಳೆದಿದೆ.

ಪ್ರಸ್ತುತ ರಾಜ್ಯಾಧ್ಯಕ್ಷರಾಗಿರುವ ಶಿವಾನಂದ ತಗಡೂರು ಅವರ ಸಾರಥ್ಯದಲ್ಲಿ ಮತ್ತಷ್ಟು ಸಕ್ರಿಯತೆಯಿಂದ ರಾಜ್ಯ ಸಂಘ ಕಾರ್ಯನಿರ್ವಹಿಸುತ್ತಿದ್ದು, ಕೋವಿಡ್ ಸಂದರ್ಭದಲ್ಲಿ ದುರ್ದೈವದಿಂದ ನಮ್ಮನ್ನ ಅಗಲಿದ ಪತ್ರಕರ್ತರ ಕುಟುಂಬಕ್ಕೆ ಸಂಘ ನೀಡಿದ ಆತ್ಮಸ್ಥೈರ್ಯದ ಬಲ ಸಂಘಟನೆಯ ಮಹತ್ವ ಸಾರಿತು ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಮಂತ್ರಿ ಮಹೋದಯರು ಸಮ್ಮೇಳನದಲ್ಲಿ ಪಾಲ್ಗೊಳ್ಳುತ್ತಿರುವುದರಿಂದ ನ್ಯಾಯಸಮ್ಮತವಾದ ಪತ್ರಕರ್ತರ ಬೇಡಿಕೆ ಸೇರಿದಂತೆ ಕಾರ್ಯನಿರತ ಪತ್ರಕರ್ತರು ಎದುರಿಸುತ್ತಿರುವ ಸವಾಲು ಮತ್ತು ಸಮಸ್ಯೆಗಳನ್ನು ಆಳುವ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲು ರಾಜ್ಯ ಸಮ್ಮೇಳನ ವೇದಿಕೆ ಆಗಲಿದೆ ಎಂದು ಅಭಿಪ್ರಾಯಪಟ್ಟರು.

ಪತ್ರಿಕಾ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರಿಗೆ ಸನ್ಮಾನಿಸಿ ಗೌರವಿಸುವುದು ಸೇರಿದಂತೆ ಸರ್ವ ರೀತಿಯಲ್ಲಿ ಸಮ್ಮೇಳನವನ್ನು ಯಶಸ್ವಿಗೊಳಿಸಲು ರಾಜ್ಯ ಸಂಘದ ಜೊತೆಗೆ ಬೀದರ್ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಶ್ರಮಿಸುತ್ತಿದ್ದು ನಾವೆಲ್ಲ ಕೈಜೋಡಿಸೋಣ ಎಂದು ಕರೆ ನೀಡಿದರು.

# ಎಂಜಿನಿಯರ್‌ಗಳು ಕೃಷಿ ಕ್ಷೇತ್ರದತ್ತ ಆಸಕ್ತಿ ತೋರಲಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸದಾ ಒತ್ತಡದಲ್ಲೇ ಇರುವ ಇಂಜಿನಿಯರ್‌ಗಳು ಹೊಸ ಪ್ರಯತ್ನಗಳ ಮೂಲಕ ಕೃಷಿ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಉದ್ಯಮಿಗಳಾಗಬೇಕು ಎಂದು ಲೇಖಕಿ ಅನು ಚೌಡಿಪುರ ಸಲಹೆ ನೀಡಿದರು.

ನಗರದ ಮಲೆನಾಡು ಎಂಜಿನಿಯರಿಂಗ್ ಕಾಲೇಜಿನಲ್ಲಿ ಮಿ ರೈಸ್ ಫೌಂಡೆಷನ್ ವತಿಯಿಂದ ಆಯೋಜಿಸಿದ್ದ ದರೆಗುಟ್ಟಿ ಮಳೆ ಸುರಿದು ಭಾಗ-2 ಪುಸ್ತಕದ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದರೆಗುಟ್ಟಿ ಮಳೆ ಸುರಿದು ಪುಸ್ತಕವು ಭಾರತೀಯ ಕೃಷಿ ಬದುಕಿನ ಸಂಕಷ್ಟ, ಸವಾಲು ಹಾಗೂ ಪರಿಹಾರ, ಭರವಸೆಗಳನ್ನು ಪ್ರತಿಬಿಂಬಿಸುತ್ತದೆ. ತಂತ್ರಜ್ಞಾನವು ಕೃಷಿಯ ಸಂಕಷ್ಟಗಳನ್ನು ದೂರ ಮಾಡಿ ರೈತರ ಬದುಕನ್ನು ಹಸನುಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಕೃಷಿಯತ್ತ ಹಾಗು ರೈತರತ್ತ ಇಡೀ ದೇಶದ ಗಮನ ಸೆಳೆಯುವ ಆಸೆ ಇದೆ. ಈಗಾಗಲೇ ಕಾದಂಬರಿಯ ಮೊದಲ ಭಾಗವನ್ನು ಆಂಗ್ಲ ಭಾಷೆಗೆ ಅನುವಾದ ಮಾಡಿದ್ದೇನೆ. ಸದ್ಯದಲ್ಲೇ ಎರಡನೇ ಭಾಗವೂ ಅನುವಾದಗೊಳ್ಳಲಿದೆ ಎಂದರು.

ಪ್ರಗತಿಪರ ಕೃಷಿಕ ಡಾ. ವಿನಾಯಕ ಸಿಂದಿಗೆರೆ ಮಾತನಾಡಿ, ಕೃಷಿಯಲ್ಲಿ ತಂತ್ರಜ್ಞಾನ ಅಳವಡಿಸಿಕೊಳ್ಳುವುದರಿಂದ ಶ್ರಮ ಹಾಗೂ ಸಮಯ ಉಳಿತಾಯವಾಗುತ್ತದೆ. ಎಂಜಿನಿಯರಿಂಗ್ ಕಾಲೇಜಿನಲ್ಲಿ ಕೃಷಿ ಕುರಿತ ಕಾದಂಬರಿ ಬಿಡುಗಡೆಯಾಗುತ್ತಿರುವುದು ಔಚಿತ್ಯಪೂರ್ಣವೆಂದು ತಿಳಿಸಿದರು.



ಚಿಕ್ಕಮಗಳೂರಿನ ಸಾಯಿ ಏಂಜೆಲ್ಸ್ ಕಾಲೇಜಿನ ಕನ್ನಡ ಉಪನ್ಯಾಸಕ ಎನ್.ಬಿ.ಕುಮಾರಸ್ವಾಮಿ ಮಾತನಾಡಿ, ಇದು ನೈಜತೆಯನ್ನು ಒಳಗೊಂಡಿರುವ ಕಾದಂಬರಿ. ಕೃಷಿಯ ಮಹತ್ವ ದಿನೇ ದಿನೇ ಹೆಚ್ಚುತ್ತಿರುವ ಸಂದರ್ಭದಲ್ಲಿ ಕಾದಂಬರಿಯ ಪಾತ್ರಗಳು ನಮ್ಮನ್ನು ಬೇರೆ ಲೋಕಕ್ಕೆ ಕರೆದೊಯ್ಯುತ್ತವೆ. ಚಿಕ್ಕಚಿಕ್ಕ ಕಾರಣಗಳಿಗೆ ಕುಟುಂಬಗಳು ಒಡೆಯುತ್ತಿರುವ ಕಾಲದಲ್ಲಿ ಈ ಕಾದಂಬರಿ ಬದುಕಿನ ಒಲವಿನ ಮಹತ್ವವನ್ನು ತಿಳಿಸುತ್ತದೆ. ಲೇಖಕಿ ಮಮತಾ ಪ್ರಭು ಅವರು ಕೃಷಿ ಹಾಗು ಪ್ರೇಮ ಎರಡನ್ನೂ ಹದವಾಗಿ ಬೆರೆಸಿದ್ದಾರೆ. ಯುವ ರೈತರತ್ತ ಯುವತಿಯರ ಒಲವನ್ನು ಸೆಳೆಯುವ ಅವರ ಪ್ರಯತ್ನ ಯಶಸ್ವಿಯಾಗಲಿ ಎಂದು ಹಾರೈಸಿದರು.

ಲೇಖಕಿ ಮಮತಾ ಪ್ರಭು ಮಾತನಾಡಿ, ಇದು ಕೇವಲ ಸಾಹಿತ್ಯವಲ್ಲ, ಒಂದು ಅಭಿಯಾನ, ಯುವ ರೈತರನ್ನು ವಿವಾಹವಾಗಲು ನಿರಾಕರಿಸುತ್ತಿರುವ ಯುವತಿಯರಿಗೆ ಈ ಕಾದಂಬರಿ ಸೌಮ್ಯ ಆಗ್ರಹವಾಗಿದೆ. ಒಲವಿಗೆ ವೃತ್ತಿ ಅಥವಾ ಉದ್ಯೋಗದ ಬಣ್ಣ ಹಚ್ಚಬಾರದು. ರೈತ ಎಂಬ ಕಾರಣಕ್ಕೆ ಅವರ ಪ್ರೀತಿಯನ್ನು ನಿರಾಕರಿಸಬಾರದು. ರೈತ ಸಂತಾನವಿಲ್ಲದಿದ್ದರೆ ನಾವು ಆಹಾರಕ್ಕಾಗಿ ಕಾಡು ಮೇಡು ಅಲೆದಾಡುವ ಪರಿಸ್ಥಿತಿ ಬರುತ್ತದೆ. ರೈತನು ಸಮಾಜದ, ಪೀಳಿಗೆಯ ಹಾಗೂ ಮಣ್ಣಿನ ಆರೋಗ್ಯ ಕಾಪಾಡುವ ವೈದ್ಯನೆಂದರು.

ಮಿ ರೈಸ್ ಫೌಂಡೇಶನ್ ಸಿಇಓ ಡಾ. ಗೀತಾ ಕಿರಣ್, ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಪ್ರಧಾನ ಕಾರ್ಯದರ್ಶಿ ಜಗದೀಶ್ ಚೌಡುವಳ್ಳಿ, ಪ್ರೊ. ಮೋಹನ, ಲಕ್ಷ್ಮಿ ಇತರರಿದ್ದರು.

# ರೋಡ್ ರೋಲರ್‌ಗೆ ಬೈಕ್ ಡಿಕ್ಕಿಯಾಗಿ ವ್ಯಕ್ತಿ ಸಾವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ರೋಡ್ ರೋಲರ್‌ಗೆ ಡಿಕ್ಕಿಯಾಗಿ ಬೈಕ್ ಹಿಂಬದಿ ಕುಳಿತಿದ್ದ ಸವಾರ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಮಾರಶೆಟ್ಟಿಹಳ್ಳಿ ಮಂಗಳಾಪುರ ಗೇಟ್ ಸಮೀಪ ನಡೆದಿದೆ.

ದುದ್ದ ಹೋಬಳಿ ಚಾಮರಾಜಪುರ ಗ್ರಾಮದ ಚಿರಂಜೀವಿ ಮೃತರು. ಕೆಲಸದ ನಿಮಿತ್ತ ತಿಪಟೂರಿಗೆ ಸ್ನೇಹಿತ ಸುನೀಲ್ ಜೊತೆಗೆ ಹೋಗುತ್ತಿದ್ದಾಗ ಅವಘಡ ಸಂಭವಿಸಿದೆ. ತಿಪಟೂರು ರಸ್ತೆಯ ಮಂಗಳಾಪುರ ಗೇಟ್ ಸಮೀಪ ಅತಿವೇಗ ಹಾಗೂ ನಿರ್ಲಕ್ಷ್ಯದಿಂದ ಓಡಿಸಿದ ಪರಿಣಾಮ ಮುಂದೆ ಹೊರಟಿದ್ದ ರೋಡ್ ರೋಲರ್‌ಗೆ ಬೈಕ್ ಡಿಕ್ಕಿಯಾಗಿದೆ. ತೀವ್ರ ರಕ್ತಸ್ರಾವವಾಗಿ ಚಿರಂಜೀವಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗಂಭೀರ ಗಾಯಗೊಂಡಿರುವ ಸುನೀಲ್‌ನನ್ನು ಹಿಮ್ಸ್‌ಗೆ ದಾಖಲಿಸಲಾಗಿದೆ. ಗಂಡಸಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಜಾವಗಲ್ ಗ್ರಾ.ಪಂ. ಸಂತೆ ಸುಂಕ ಹರಾಜು ಪ್ರಕ್ರಿಯೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ತಾಲ್ಲೂಕಿನ ಜಾವಗಲ್ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಂತೆ ಹಾಗು ಬೀದಿ ಬದಿ ವ್ಯಾಪಾರಸ್ಥರ ಸುಂಕದ ಬಹಿರಂಗ ಹರಾಜಿನಿಂದ 14.6 ಲಕ್ಷ ರೂ. ಆದಾಯ ಬಂದಿದೆ ಎಂದು ಗ್ರಾ.ಪಂ. ಆಡಳಿತಾಧಿಕಾರಿ ಕೆ.ಎಂ.ಯಶೋಧಮ್ಮ ತಿಳಿಸಿದರು.

ಗ್ರಾಮ ಪಂಚಾಯಿತಿ ಕಚೇರಿ ಆವರಣದಲ್ಲಿ ಹಮ್ಮಿಕೊಂಡಿದ್ದ ಬಹಿರಂಗ ಹರಾಜು ಪ್ರಕ್ರಿಯೆ ಬಳಿಕ ಮಾತನಾಡಿದ ಅವರು, ನಿಯಮಾವಳಿಯಂತೆ ಹರಾಜು ಪ್ರಕ್ರಿಯೆ ನಡೆದಿದೆ. ನಿಗದಿತ ಮೊತ್ತವನ್ನು ಪಂಚಾಯಿತಿಯ ಬ್ಯಾಂಕ್ ಖಾತೆಗೆ ಪಾವತಿ ಮಾಡಿ ರಶೀದಿ ಪಡೆಯಬೇಕು. ನಿಯಮ ಉಲ್ಲಂಘನೆ ಮಾಡಿದರೆ ಕಟ್ಟಿದ ಠೇವಣಿ ಹಣ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಎಂದರು.

ತಾಲ್ಲೂಕಿನಾದ್ಯಂತ ಸುಮಾರು 12+12 ಜನ ಎರಡು ಬಿಡ್‌ನಲ್ಲಿ ಭಾಗವಹಿಸಲು ಠೇವಣಿ ಇರಿಸಿದ್ದರು. ನಿಗದಿತ ಸಮಯಕ್ಕೆ ಸರಿಯಾಗಿ ಬಿಡ್ ಪ್ರಾರಂಭಿಸಲಾಗಿ ಸಂತೆ ಸುಂಕ ಹರಾಜನ್ನು ಜೆ.ಜಿ. ತಿಮ್ಮೇಗೌಡ ಅವರು 7 ಲಕ್ಷ ರೂ.ಗೆ ತಮ್ಮದಾಗಿಸಿಕೊಂಡರು. ಬೀದಿ ಬದಿ ವ್ಯಾಪಾರಿಗಳ ಅಂಗಡಿಗಳ ಸುಂಕವನ್ನು 7.6 ಲಕ್ಷ ರೂ. ಕೂಗಿ ಹೇಮಕುಮಾರ್ ತಮ್ಮದಾಗಿಸಿಕೊಂಡರು.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರವಿ ,ಕಾರ್ಯದರ್ಶಿ ನಂದಿನಿ, ಲೆಕ್ಕ ಸಹಾಯಕಿ ಶೋಭ, ಮಾಜಿ ಸದಸ್ಯರಾದ ಪರಮೇಶ, ದೊರೆ, ಸಂತೋಷ, ಪ್ರಭಾಕರ, ಅಶೋಕ, ಗ್ರಾಮಸ್ಥರಾದ ಜೆ.ಕೆ. ಸಿದ್ದೇಗೌಡ, ಜೆ.ಕೆ.ಚಿಕ್ಕಯ್ಯ, ದೇವರಾಜು, ಹಳೇಬೀಡು ಸಿದ್ದರಾಜು, ಬಾಬು, ಮಂಜು, ಲೋಕೇಶ್ ಮತ್ತಿತರರು ಇದ್ದರು.

# ಚನ್ನಕೇಶವ ದೇವಾಲಯದಲ್ಲಿ ಸಿಲಿಂಡರ್ ಸಮಸ್ಯೆ ನಿವಾರಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಮಧ್ಯ ಪ್ರಾಚ್ಯ ರಾಷ್ಟ್ರಗಳಲ್ಲಿ ಯುದ್ಧ ಭೀತಿಯಿಂದ ಎಲ್‌ಪಿಜಿ ಸಿಲಿಂಡರ್ ಸಿಗದೆ ದಾಸೋಹಕ್ಕೆ ಅಡಚಣೆಯಾದ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಜಿಲ್ಲಾಡಳಿತ ಒಂದೇ ಬಾರಿಗೆ 20 ಸಿಲಿಂಡರ್‌ಗಳನ್ನು ತಲುಪಿಸುವ ಮೂಲಕ ಭಕ್ತರಿಗೆ ಸಮಸ್ಯೆಯಾಗದಂತೆ ಮುನ್ನೆಚ್ಚರಿಕೆ ವಹಿಸಿದೆ.

ಸಿಲಿಂಡರ್ ಖಾಲಿಯಾದ್ದರಿಂದ ಎರಡು ದಿನ ದಾಸೋಹ ಬಂದ್ ಮಾಡಲಾಗಿತ್ತು. ಅದರಿಂದ ಎಚ್ಚೆತ್ತ ಅಧಿಕಾರಿಗಳು ಹೆಚ್‌ಪಿಸಿಎಲ್ ಅಧಿಕಾರಿಗಳೊಂದಿಗೆ ಚರ್ಚಿಸಿ ಸಿಲಿಂಡರ್‌ಗಳನ್ನು ಪೂರೈಸಿದ್ದಾರೆ. ಕೆಲ ದಿನಗಳಿಂದ ಗೃಹೋಪಯೋಗಿ ಸಿಲಿಂಡರ್‌ಗಳಿಗೆ ಮಾತ್ರ ಆದ್ಯತೆ ನೀಡುತ್ತಿದ್ದುದರಿಂದ ಮತ್ತು ವಾಣಿಜ್ಯ ಸಿಲಿಂಡರ್‌ಗಳ ಸರಬರಾಜು ಸ್ಥಗಿತಗೊಂಡಿದೆ.



ಮಾ. 23 ರಿಂದ ಚನ್ನಕೇಶವಸ್ವಾಮಿ ಜಾತ್ರಾ ಮಹೋತ್ಸವ ಪ್ರಾರಂಭವಾಗುತ್ತಿದ್ದು ಭಕ್ತರ ಸಂಖ್ಯೆ ಹೆಚ್ಚಲಿದೆ. ಸಾವಿರಾರು ಭಕ್ತರಿಗೆ ಅನ್ನ ದಾಸೋಹ ಕಲ್ಪಿಸಲು ಸಹ ಸಮಸ್ಯೆಯಾಗಿತ್ತು. ಆದರೆ ಈ ವಿಷಯವಾಗಿ ಸಂಬಂಧಿಸಿದ ಅಧಿಕಾರಿಗಳು ಮತ್ತು ಗ್ಯಾಸ್ ಏಜೆನ್ಸಿ ಮಾಲೀಕರೊಂದಿಗೆ ಮಾತುಕತೆ ನಡೆಸಿ ಅಡುಗೆ ಅನಿಲದ ಸರಬರಾಜು ಮಾಡುವಂತೆ ಮನವಿ ಮಾಡಿದ ಹಿನ್ನಲೆಯಲ್ಲಿ ಕ್ರಮ ವಹಿಸಲಾಗಿದೆ.

ಚನ್ನಕೇಶವ ಸ್ವಾಮಿ ಗ್ಯಾಸ್ ಏಜೆನ್ಸಿ ಮಾಲೀಕ ದೇವು ಪ್ರಸಾದ್ ಅವರೇ 20 ಸಿಲಿಂಡರ್‌ಗಳನ್ನು ನೀಡಿದರು. ಮುಂದಿನ ದಿನಗಳಲ್ಲಿ ಅನ್ನ ದಾಸೋಹ ಸುಗಮವಾಗಿ ಮುಂದುವರಿಯಲು ಇನ್ನೂ 10 ರಿಂದ 20 ವಾಣಿಜ್ಯ ಸಿಲಿಂಡರ್‌ಗಳನ್ನು ಹೆಚ್ಚುವರಿಯಾಗಿ ಪೂರೈಸುವ ಸಾಧ್ಯತೆ ಇರುವುದಾಗಿ ತಿಳಿದು ಬಂದಿದ್ದು, ಈ ಮೂಲಕ ದಾಸೋಹಕ್ಕೆ ಆಗಬಹುದಾದ ದೊಡ್ಡ ತೊಂದರೆಯನ್ನು ನಿವಾರಿಸುವ ಮೂಲಕ ಭಕ್ತರ ಆತಂಕ ದೂರ ಮಾಡಲಾಗಿದೆ.

ದೇವು ಪ್ರಸಾದ್ ಮಾತನಾಡಿ, ಗ್ಯಾಸ್ ಸಿಲಿಂಡರ್‌ಗಳ ಅಭಾವದಿಂದ ಎರಡು ದಿನ ದಾಸೋಹ ಬಂದ್ ಆಗಿದ್ದು ಬೇಸರ ತರಿಸಿತ್ತು. ಆದರೆ ಈ ವಿಚಾರವಾಗಿ ಜಿಲ್ಲಾಡಳಿತದ ಸಹಕಾರ ಮತ್ತು ಹೆಚ್‌ಪಿಸಿಎಲ್ ಅಧಿಕಾರಿಗಳ ನೆರವಿನಿಂದ ದಾಸೋಹ ವ್ಯವಸ್ಥೆ ನಿರಂತರವಾಗಿ ನಡೆಯಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ದೇಗುಲದ ಸಿಬ್ಬಂದಿ ಸುಧಾಕರ್, ಗ್ಯಾಸ್ ಏಜೆನ್ಸಿಯ ಲತಾ ಮಂಜೇಶ್ವರಿ, ಕಿಟ್ಟಿ ಇದ್ದರು.

# ಬೇಲೂರಿನಲ್ಲಿ ಆರೋಗ್ಯ ಉಚಿತ ತಪಾಸಣೆ ಯಶಸ್ವಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಲಯನ್ಸ್ ಕ್ಲಬ್, ಕಾವೇರಿ ಕ್ಲಿನಿಕ್, ಚಿಕ್ಕಮಗಳೂರಿನ ಕೆಆರ್ ಎಸ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಹಾಸನದ ಎಂಎಂಎಂ ಆಸ್ಪತ್ರೆ ವತಿಯಿಂದ ಭಾನುವಾರ ಪಟ್ಟಣದ ಕಾವೇರಿ ಕ್ಲಿನಿಕ್ ಆವರಣದಲ್ಲಿ ಆರೋಗ್ಯ ಉಚಿತ ಶಿಬಿರ ಆಯೋಜಿಸಲಾಗಿತ್ತು.

ಕಾವೇರಿ ಕ್ಲಿನಿಕ್ ವೈದ್ಯಾಧಿಕಾರಿ ಡಾ. ಚಂದ್ರಮೌಳಿ ಮಾತನಾಡಿ, ತಾಲ್ಲೂಕಿನ ಸಾರ್ವಜನಿಕರ ಅನುಕೂಲಕ್ಕಾಗಿ ಲಯನ್ಸ್ ಸಂಸ್ಥೆಯಿಂದ ಕಳೆದ 14 ವರ್ಷಗಳಿಂದ ಸಮಾಜಮುಖಿ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಆರೋಗ್ಯ ಉಚಿತ ತಪಾಸಣಾ ಶಿಬಿರಗಳನ್ನು ಪಟ್ಟಣ ಹಾಗು ಗ್ರಾಮೀಣ ಪ್ರದೇಶದಲ್ಲಿ ಆಯೋಜಿಸಿ ತಪಾಸಣೆ ನಡೆಸುತ್ತಿದೆ. ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಖ್ಯಾತ ವೈದ್ಯರನ್ನು ಬೇಲೂರಿಗೆ ಆಹ್ವಾನಿಸಿ ಸಾರ್ವಜನಿಕರ ಆರೋಗ್ಯ ತಪಾಸಣೆ ನಡೆಸುವ ವ್ಯವಸ್ಥೆ ಮಾಡಲಾಗುತ್ತಿದೆ. ಹೆಚ್ಚಿನ ಚಿಕಿತ್ಸೆಯ ಅಗತ್ಯವಿದ್ದರೆ ಸಂಬಂಧಿತ ಆಸ್ಪತ್ರೆಗಳ ವಿಳಾಸ ಹಾಗು ಮಾಹಿತಿ ನೀಡಲಾಗುವುದು. ಸಾರ್ವಜನಿಕರು ಇಂತಹ ಉಚಿತ ಶಿಬಿರಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದರು.




ಲಯನ್ಸ್ ಕ್ಲಬ್ ಅಧ್ಯಕ್ಷೆ ತಾರಾಮಣಿ ಸುರೇಶ್ ಮಾತನಾಡಿ, ಈ ಶಿಬಿರದಲ್ಲಿ ಮಧುಮೇಹ (ಶುಗರ್), ರಕ್ತದೊತ್ತಡ, ಹೃದಯ ರೋಗ, ಮಕ್ಕಳ ಆರೋಗ್ಯ ತಪಾಸಣೆ, ಮೂಳೆ ಮತ್ತು ಕೀಲು ಸಮಸ್ಯೆಗಳು, ಸ್ತ್ರೀ ರೋಗ, ನರರೋಗ ಹಾಗು ಕಣ್ಣಿನ ರೋಗಗಳ ತಪಾಸಣೆ ನಡೆಸಲಾಗುತ್ತಿದೆ. ನಮ್ಮ ಸಂಸ್ಥೆಯಿಂದ ಇಂತಹ ಹಲವಾರು ಶಿಬಿರಗಳನ್ನು ವಿವಿಧ ಆಸ್ಪತ್ರೆಗಳ ವೈದ್ಯರ ಸಹಕಾರದೊಂದಿಗೆ ಆಯೋಜಿಸಲಾಗುತ್ತಿದೆ ಎಂದು ಹೇಳಿದರು.

# ಇತಿಹಾಸದಲ್ಲಿ ಈ ದಿನ

## ಮಾರ್ಚ್-17

**1757:** ಬ್ರಿಟಿಷ್ ಸೇನೆ ಮತ್ತು ಬೆಂಗಾಲ್ ನವಾಬ್ ಸಿರಾಜುದ್ದೌಲ್ ಅವರ ಸೇನೆಯ ನಡುವೆ ಚಂದನ ನಗರ ಯುದ್ಧ ನಡೆಯಿತು.

**1898:** ಇಂಗ್ಲೆಂಡ್‌ನ ಪ್ರಸಿದ್ಧ ಫುಟ್ಬಾಲ್ ಕ್ಲಬ್ ವೆಸ್ಟ್ ಹ್ಯಾಮ್ ಯುನೈಟೆಡ್ ಸ್ಥಾಪನೆಯಾಯಿತು.

**1959:** ಟಿಬೆಟ್‌ನ ಆಧ್ಯಾತ್ಮಿಕ ನಾಯಕ ದಲೈ ಲಾಮಾ (ತೆನ್ಜಿನ್ ಗ್ಯಾತ್ಸೋ) ಚೀನಾದ ಆಳ್ವಿಕೆಯಿಂದ ತಪ್ಪಿಸಿಕೊಳ್ಳಲು ಲಾಸಾ ನಗರದಿಂದ ಭಾರತಕ್ಕೆ ಪಲಾಯನ ಆರಂಭಿಸಿದರು.

**1992:** ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದ (ಅಪಾರ್ಥೈಡ್) ನೀತಿಯನ್ನು ಅಂತ್ಯಗೊಳಿಸುವ ಕುರಿತು ನಡೆದ ಜನಮತ ಸಮೀಕ್ಷೆಯಲ್ಲಿ ಬಹುಮತ ಜನರು ಬೆಂಬಲ ನೀಡಿದರು.

**2018:** ರಷ್ಯಾದ ಅಧ್ಯಕ್ಷರಾಗಿ ವ್ಲಾದಿಮಿರ್ ಪುಟಿನ್ ಮತ್ತೊಮ್ಮೆ ಅಧಿಕಾರಕ್ಕೆ ಬರಲು ನಡೆದ ಚುನಾವಣಾ ಪ್ರಕ್ರಿಯೆ ಆರಂಭವಾಯಿತು.

ಜನನ

**1919:** ದೆಹಲಿ ಮಾಜಿ ಮುಖ್ಯಮಂತ್ರಿ ಶೀಲಾ ದೀಕ್ಷಿತ್

**1948:** ಭಾರತದ ಖ್ಯಾತ ಕ್ರಿಕೆಟ್ ಆಟಗಾರ ಕಪಿಲ್ ದೇವ್

**1975:** ಕನ್ನಡ ಚಲನಚಿತ್ರ ನಟ ಪುನೀತ್ ರಾಜಕುಮಾರ

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248